## ಬೆಳದಿಂಗಳ ಸಂಗೀತ 215

15 ಆಗಸ್ಟ್ 2019

ಗಾಯನ

ವಿದ್ವಾನ್ ಪ್ರಸನ್ನ ವೆಂಕಟರಾಮನ್

ವಯೊಲಿನ್

ವಿದ್ವಾನ್ ಕೆ.ಜೆ. ದಿಲೀಪ್

ಮೃದಂಗ

ವಿದ್ವಾನ್ ಅರ್ಜುನ್ ಕುಮಾರ

ಫೋನ್: 0821-2548220, 2548221 * ಫ್ಯಾಕ್ಸ್: 0821-2548219 * ಇಮೇಲ್: jssashram@yahoo.com

# ಶ್ರೀ ಸುತ್ತೂರು ಮಠ, ಮೈಸೂರು ಶಾಖೆ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

## ಗುರುಪೂರ್ಣಿಮಾ ಹಾಗೂ ಬೆಳದಿಂಗಳ ಸಂಗೀತ 214

16 ಜುಲೈ 2019 * ಮಂಗಳವಾರ * ಸಂಜೆ 6.00

ದಿವ್ಯ ಸಾನ್ನಿಧ್ಯ

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ



ಉಪನ್ಯಾಸ

ಡಾ. ಎನ್.ಎಸ್. ತಾರಾನಾಥ



ಗಾಯನ

ಕು. ಸುನೀತಾ ಹಿರೇಮಠ್



ಹಾರ್ಮೋನಿಯಂ

ಪಂ. ವೀರಭದ್ರಯ್ಯ ಹಿರೇಮಠ್



ತಬಲ

ಪಂ. ರಮೇಶ್ ಧನ್ನೂರ್

**ಡಾ.ಎನ್.ಎಸ್. ತಾರಾನಾಥ್**ರವರು ಕರ್ನಾಟಕದ ವಿದ್ವತ್ ಪರಂಪರೆಯಲ್ಲಿ ಮುಂಚೂಣಿಯಲ್ಲಿ ನಿಲ್ಲುವವರು. ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ. ಪಿ.ಹೆಚ್.ಡಿ. ಪದವಿ ಪಡೆದ ಇವರು ಅಲ್ಲಿಯೇ ಸುಮಾರು ಮೂರು ದಶಕಗಳ ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಇವರೊಬ್ಬರು ಸಮರ್ಥ ಸಂಶೋಧಕರು, ಬರಹಗಾರರು ಮತ್ತು ವಾಗ್ಮಿಗಳು.

**ಕು. ಸುನೀತಾ ಹಿರೇಮಠರು** ಹಿಂದೂಸ್ತಾನಿ ಸಂಗೀತಕ್ಷೇತ್ರದ ಹೊಸ ತಲೆಮಾರಿನ ಕಲಾವಿದರು. 5ನೆಯ ವರ್ಷದಿಂದಲೇ ಸಂಗೀತದತ್ತ ಆಕರ್ಷಿತರಾದವರು. ತಂದೆ ಪಂ. ವೀರಭದ್ರಯ್ಯ ಹಿರೇಮಠರವರಲ್ಲಿ ಪ್ರಾರಂಭಿಕ ಶಿಕ್ಷಣ ಪಡೆದರು. ಪ್ರಸ್ತುತ ಆಗ್ರಾ ಘರಾನೆಯ ಹಿರಿಯ ಕಲಾವಿದ ಪಂ. ಇಂದೂಧರ ನಿರೋಡಿಯವರಲ್ಲಿ ಉನ್ನತ ಸಾಧನೆ ಮಾಡುತ್ತಿದ್ದಾರೆ. ಮೊದಲನೆಯ ಕಾರ್ಯಕ್ರಮ ಮೈಸೂರಿನ ಶ್ರೀ ಸತ್ಯಸಾಯಿ ಸೇವಾಸಂಸ್ಥೆಗಳ ಆಶ್ರಯದಲ್ಲಿ ನಡೆಯಿತು. ಗಾನಭಾರತೀ, ನಾದಬ್ರಹ್ಮ ಸಂಗೀತ ಸಭಾ, ಕಲಾಮಂದಿರ ಮೊದಲಾದ ಹಲವಾರು ಪ್ರತಿಷ್ಠಿತ ವೇದಿಕೆಗಳಲ್ಲಿ ಹಾಡಿ ಸಂಗೀತಾಸಕ್ತರನ್ನು ರಂಜಿಸಿದ್ದಾರೆ. 2015ನೇ ಸಾಲಿನ ದಸರಾ ಮಹೋತ್ಸವದಲ್ಲಿ ಮೈಸೂರು ಅರಮನೆಯಲ್ಲಿ ಕಾರ್ಯಕ್ರಮ ನೀಡಿದ್ದಾರೆ. ಮಧುರ ಶಾರೀರ, ಸುಕುಮಾರ ಮನೋಧರ್ಮ ಮತ್ತು ಶಾಸ್ತ್ರಶುದ್ಧಿ ಇವರ ಸಂಗೀತದ ಧನಾತ್ಮಕ ಅಂಶಗಳು. ಮುಂಬಯಿಯ ಗಂಧರ್ವ ಮಹಾವಿದ್ಯಾಲಯದಿಂದ ಮೂರು ಶ್ರೇಣಿಯ ಪ್ರಮಾಣಪತ್ರ ಪಡೆದಿದ್ದಾರೆ. ಕು. ಸುನೀತಾರವರು ನವದೆಹಲಿಯ ಸಾಂಸ್ಕೃತಿಕ ಸಂಪನ್ಮೂಲ ಮತ್ತು ಪ್ರಶಿಕ್ಷಣ ಕೇಂದ್ರದ ವಿದ್ಯಾರ್ಥಿವೇತನ ಗಳಿಸಿದ ಪ್ರತಿಭಾವಂತರು. ಹಲವಾರು ಪ್ರಶಸ್ತಿಗಳನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ಬಿ.ಇ. ಪದವೀಧರರು. ಪ್ರಸ್ತುತ ಎಂ.ಟೆಕ್. ವ್ಯಾಸಂಗ ಮಾಡುತ್ತಿದ್ದಾರೆ.

**ಪಂ. ವೀರಭದ್ರಯ್ಯ ಹಿರೇಮಠರವರು** ಖ್ಯಾತ ಹಿಂದೂಸ್ತಾನಿ ಕಲಾವಿದರು. ಇವರು ಗದುಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದ ಡಾ. ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರು, ಗುರುಕುಲ ಪದ್ಧತಿಯಲ್ಲಿ ಸಂಗೀತವನ್ನು ಮೈಗೂಡಿಸಿಕೊಂಡವರು. ಗಂಧರ್ವ ಮಹಾವಿದ್ಯಾನಿಲಯದ 'ಸಂಗೀತ ವಿಶಾರದ'ರು. ದೇಶದಾದ್ಯಂತ ಹಲವಾರು ಪ್ರತಿಷ್ಠಿತ ವೇದಿಕೆಗಳಲ್ಲಿ ತಮ್ಮ ಕಲೆಯನ್ನು ಪ್ರದರ್ಶಿಸಿ ಜನಮನ ಸೂರೆಗೊಂಡಿದ್ದಾರೆ. ಅತ್ಯುತ್ತಮ ಹಾರ್ಮೋನಿಯಂ ವಾದಕರು. ಗದುಗಿನ ಗಾನಗಂಧರ್ವ ಕಲಾ ಟ್ರಸ್ಟ್ ಇವರಿಗೆ 'ಗಾನಶ್ರೀ' ಎಂಬ ಬಿರುದನ್ನು ನೀಡಿ ಸನ್ಮಾನಿಸಿದೆ. ಮೈಸೂರಿನ 'ಸ್ವರಸಂಕುಲ' ಸಂಗೀತಶಾಲೆಯ ಮೂಲಕ ಭವಿಷ್ಯದ ಕಲಾವಿದರನ್ನು ರೂಪಿಸುತ್ತಿದ್ದಾರೆ; ಹಿಂದೂಸ್ತಾನಿ ಸಂಗೀತದ ಪ್ರಸಾರಕ್ಕಾಗಿ ಅಪಾರವಾಗಿ ಶ್ರಮಿಸುತ್ತಿದ್ದಾರೆ.

**ಪಂ. ರಮೇಶ್ ಧನ್ನೂರ್**ರವರು ನಾಡಿನ ಹಿರಿಯ ತಬಲಾ ವಾದಕರು. ಇವರು ಸಹ ಗದುಗಿನ ಪಂ. ಪುಟ್ಟರಾಜ ಗವಾಯಿಗಳ ಬಳಿ ಶಿಷ್ಯವೃತ್ತಿ ಮಾಡಿದ್ದಾರೆ. ನಾಡಿನ ಅನೇಕ ಹೆಸರಾಂತ ಕಲಾವಿದರಿಗೆ ತಬಲಾ ಸಾಥ್ ನೀಡಿದ್ದಾರೆ.